ಶ್ರೀ ಜಿ. ಎಸ್. ಆಚಾರ್.—ಈಗಿರತಕ್ಕ ಸಬ್ ಸ್ಟೇಷನ್ ಮಂಗಳೂರು ಮತ್ತು ಕುಂದಾಪುರ ಇವುಗಳ ಮಧ್ಯೆ ಇದ್ದು ಇಲ್ಲಿರತಕ್ಕ ಲೈಟುಗಳು ಬಹಳ ಡಿಂ ಆಗಿರುವುದರಿಂದ ಬೈಂದೂರಿನಲ್ಲಿ ಒಂದು ಸಬ್ ಸ್ಟೇಷನ್ ಆಗಬೇಕೆಂದು ಈಗ್ಗೆ ೨ ವರ್ಷಗಳ ಹಿಂದೆಯೇ ಹೇಳಿದ್ದೆವು ಅಂದಿನ ಮಾನ್ಯ ವಿದ್ಯುತ್ ಮಂತ್ರಿಗಳು ೮೭ರ ಮಾರ್ಚಿಯೊಳಗೆ ಮಾಡಿಕೊಡುತ್ತೇವೆಂದು ಹೇಳಿದ್ದರು ನಂತರ ೮೮ರ ಮಾರ್ಚಿಯೊಳಗೆ ಸ್ಥಾಪಿಸುತ್ತೇವೆಂದು ಹೇಳಿದರು, ಆದರೂ ಆಗಲಿಲ್ಲ ಈಗ ೮೯ರ ಮಾರ್ಚಿಯೊಳಗಾದರೂ ಅಲ್ಲಿ ಸ್ಥಾಪನೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ, ಬೈಂದೂರಿನಲ್ಲಿ ಉಪ ವಿಭಾಗವನ್ನು ಸ್ಥಾಪಿಸಿರುವ ವಿಷಯ ಉಡುಪಿ ವಿಭಾಗದ ಪುನರ್ರಚನೆ ಸಮಯದಲ್ಲಿ ಪರಿಶೀಲಿಸುವುದಾಗಿ ಹೇಳಿದ್ದೀರಿ. ಈ ಪುನರ್‌ರಚನೆ ಸಮಯವನ್ನು ಪುನರ್ ಪರಿಶೀಲಿಸುವುದಾದರೂ ಯಾವಾಗ ಎಂಬುದನ್ನು ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಸಬ್ ಸ್ಟೇಷನ್ ಬಗ್ಗೆ ಈಗಾಗಲೇ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಬೇಕಾದ ಜಾಗವನ್ನೂ ತೆಗೆದುಕೊಂಡಿದ್ದೇವೆ. ಇನ್ನು ಕೆಲವಾರು ತಿಂಗಳುಗಳಲ್ಲಿ ಸಬ್ ಸ್ಟೇಷನ್ ತೆರೆಯುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ,

ಇನ್ನು ಸಬ್ ಡಿವಿಜನನ್ನು ತೆರೆಯುವ ವಿಚಾರದಲ್ಲಿ ನಾನು ಕ್ಷಣ ಅಭಿವ್ಯಾಯವನ್ನು ಹೇಳುವುದು ಕ್ಯಾಗುವುದಿಲ್ಲ. ಏಕೆಂದರೆ ಯಾವುದೇ ಒಂದು ಸ್ಥಳದಲ್ಲಿ ಒಂದು ಸಬ್ ಡಿವಿಜನ್ ಎಂದು ತೆರೆಯಬೇಕಾದರೆ ಅದಕ್ಕೆ ಸಂಬಂಧಪಟ್ಟಂತೆ ಇಡೀ ಡಿವಿಜನ್‌ನ್ನು ರಿವೈಸ್ ಮಾಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಕೇಳಿರತಕ್ಕ ಸ್ಥಳದಲ್ಲಿ ಸಬ್ ಡಿವಿಜನ್‌ನ್ನು ಸ್ಥಾಪನೆ ಮಾಡಬೇಕಾದರೆ ಅದು ಬೋರ್ಡ್‌ನಲ್ಲಿ ತೀರ್ಮಾನವಾಗಬೇಕು, ಇದಕ್ಕೆ ಸಾಕಷ್ಟು ಹಣವೂ ಕೂಡ ಬೇಕಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರಿಗೆ ಇಷ್ಟು ಮಾತ್ರ ಹೇಳುತ್ತೇನೆ ಆದಷ್ಟು ಜಾಗ್ರತೆ ಎಂದರೆ ಡೇಟ್ ಮತ್ತು ತಿಂಗಳು ಯಾವಾಗ ಎಂದು ಹೇಳುವುದಕ್ಕಾಗುವುದಿಲ್ಲ ಅಲ್ಲಿಗೆ ಭೇಟಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ಓಲ್ಟೇಜ್ ಪ್ರಾಬ್ಲಮ್ ಬಗ್ಗೆ ಏನು ಹೇಳಿರುತ್ತಾರೆ ಅದೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ.

ಕರ್ನಾಟಕದಲ್ಲಿ ಕೈಗಾರಿಕಾ ಕ್ಷೇತ್ರಗಳು

೨೯೪. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇದುವರೆಗೆ ಎಷ್ಟು ತಾಲ್ಲೂಕುಗಳಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲಾಗಿದೆ (ಜಿಲ್ಲೆಗಳೊಂದಿಗೆ ವಿವರಣೆಗಳನ್ನು ಒದಗಿಸಬೇಕು)

ಆ) ೧೯೮೮-೮೯ರಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಕೈಗಾರಿಕಾ ಶೆಡ್ಡುಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ (ಜಿಲ್ಲೆಗಳೊಂದಿಗೆ ವಿವರಗಳನ್ನು ಒದಗಿಸಬೇಕು)

ಇ) ಕೋಲಾರ ಜಿಲ್ಲೆಯಲ್ಲಿ ನಿರ್ಮಿಸಿದ ಕೈಗಾರಿಕಾ ಶೆಡ್ಡುಗಳು ಹಾಗೂ ನಿರ್ಮಿಸಲು ಉದ್ದೇಶಿಸಲಾದ ಶೆಡ್ಡುಗಳು (ತಾಲ್ಲೂಕುಗಳೊಂದಿಗೆ ವಿವರಗಳನ್ನು ಒದಗಿಸಬೇಕು)

ಈ) ಮುಳಬಾಗಲು ತಾಲ್ಲೂಕಿನಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲು ಯಾವುದೇ ರೀತಿಯ ಜಮೀನನ್ನು ಪಡೆದುಕೊಂಡಿಲ್ಲವೆಂಬುದು ನಿಜವೇ ? ನಿಜವಾಗಿದ್ದರೆ ಕಾರಣಗಳನ್ನು ಕೊಡಿ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ೬೫ ತಾಲ್ಲೂಕು (ಜಿಲ್ಲೆಗಳ ವಿವರಗಳನ್ನು ಲಗತ್ತಿಸಲಾಗಿದೆ).

ಆ) ೭ ತಾಲ್ಲೂಕುಗಳಲ್ಲಿ (ಹೆಚ್ಚುವರಿ ಕೈಗಾರಿಕಾ ಶೆಡ್ಡುಗಳನ್ನು ಹಾಲಿ ಇರುವ ಕೈಗಾರಿಕಾ ವಸಾಹತುವಿನಲ್ಲಿ ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿದೆ).

ವಿವರಗಳನ್ನು ಕೆಳಗೆ ನಮೂದಿಸಲಾಗಿದೆ.

	ಜಿಲ್ಲೆ	ತಾಲ್ಲೂಕು	ಸ್ಥಳ
	೧	೨	೩
೧	ಬೆಂಗಳೂರು	ಬೆಂಗಳೂರು ಉತ್ತರ	ಪೀಣ್ಯ ೨ನೇ ಹಂತ
೨	ಬೆಂಗಳೂರು	ಬೆಂಗಳೂರು ದಕ್ಷಿಣ	ಬೊಮ್ಮಸಂದ್ರ
೩	ಮೈಸೂರು	ಮೈಸೂರು	ಮಹದೇವಪುರ
೪	ದಕ್ಷಿಣ ಕನ್ನಡ	ಮಂಗಳೂರು	ಬೈಕಂಪಾಡಿ
೫	ಶಿವಮೊಗ್ಗ	ಶಿವಮೊಗ್ಗ	ಶಿವಮೊಗ್ಗ
೬	ಬೆಳಗಾಂ	ಬೆಳಗಾಂ	ಅನಗೋಲ ಮತ್ತು ಉದ್ಯಮಬಾಗ
೭	ಬೆಳಗಾಂ	ಖಾನಾಪುರ	ಖಾನಾಪುರ

೧) ಆ) ನಿರ್ಮಿಸಲಾದ ಶೆಡ್ಡುಗಳು

ಕ್ರಮ ಸಂಖ್ಯೆ	ತಾಲ್ಲೂಕು	ಕೈಗಾರಿಕಾ ವಸಾಹತು	ಮಳಿಗೆಗಳ ಸಂಖ್ಯೆ
೧	೨	೩	೪
೧	ಕೋಲಾರ	ತವಂಕ	೨೦
೨	ಮಾಲೂರು	ಮಾಲೂರು	೧೨
೩	ಬಂಗಾರಪೇಟೆ	ಕೆ. ಜಿ. ಎಫ್.	೩೨
೪	ಚಿಂತಾಮಣಿ	ಚಿಂತಾಮಣಿ	೨೦
೫	ಚಿಕ್ಕಬಳ್ಳಾಪುರ	ಮುದ್ದೇನಹಳ್ಳಿ	೦೯

ಆ) ಯೋಜನೆ ಹಾಕಿಕೊಳ್ಳಲಾದ ಶೆಡ್ಡುಗಳ ನಿರ್ಮಾಣ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಕೈಗಾರಿಕಾ ವಸಾಹತು	ಮಳಿಗೆಗಳ ಸಂಖ್ಯೆ
೧	೨	೩	೪
೧	ಮುಳಬಾಗಿಲು	ಮುಳಬಾಗಿಲು	೧೦
೨	ಶಿಡ್ಲಘಟ್ಟ	ಶಿಡ್ಲಘಟ್ಟ	೨೬
೩	ಬಂಗಾರಪೇಟೆ	ಕೆ. ಜಿ. ಎಫ್	೦೨
೪	ಗೌರಿಬಿದನೂರು	ಗೌರಿಬಿದನೂರು	೧೪

ಈ) ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

KARNATAKA STATE SMALL INDUSTRIES DEVELOPMENT CORPORATION LTD.

Statement Showing Details of Industrial Estates Established by KSSIDC Ltd. In Karnataka State.

Revenue Division		District	Taluka	Industrial Estate
1		2	3	4
1	Bangalore	Bangalore	1) Bangalore North	Rajajinagar
			,,	Peenya I Stage
			,,	Peenya II Stage
			,,	Peenya III Stage
			,,	H. A. L.
			,,	Yelahanka
			2) Bangalore South	N.G.E.F.
			,,	Dyavasandra
			,,	KEONICS
			,,	Bommasandra
			,,	Kumbalgud
			3) Anekal	Veerasandra
			4) Ramanagaram	Ramanagaram
			5) Doddaballapura	Doddaballapura
			6) Magadi	Magadi
			7) Hoskote	Hoskote.
2	Bangalore	Tumkur	1) Tumkur	Tumkur
			,,	Antharasanahally
			,,	Hirehally
			2) Sira	Sira
			3) Tiptur	Tiptur
			4) Kunigal	Kunigal

3	Bangalore	Kolar	1)	Kolar	Tamaka
			2)	Malur	Malur
			3)	Bangarpet	K.G.F
			4)	Chintamani	Chintamani
			5)	Chikkaballapura	Muddenahally
4	Bangalore	Chitradurga	1)	Chitradurga	Chitradurga
			2)	Davanagere	Davanagere
			3)	Harihara	Harihara
			4)	Hosadurga	Hosadurga
5	Bangalore	Shimoga	1)	Shimoga	Shimoga
			2)	Bhadravathi	Bhadravathi
			3)	Sagar	Sagar
			4)	Shikaripura	Shiralkoppa
6	Mysore	Mysore	1)	Mysore	Yadavagiri-Mys.
				,,	Metagalli-Mys.
				,,	Hebbal-Mysore.
			2)	Kollegal	Kollegal
			3)	Hunsur	Hunsur
			4)	Piriyapattana	Seegur
			5)	Nanjangud	Nanjangud
7	Mysore	Mandya	1)	Mandya	Mandya
				,,	Mandya II Stage
			2)	Srirangapatna	Srirangapatna
8	Mysore	South Kanara	1)	Mangalore	Yayyadi
				,,	Bykampady
			2)	Karkala	Karkala
				,,	Moodabidri
			3)	Udupi	Manipal

1	3	3	4	5
9	Mysore	Hassan	1) Hassan	Hassan
			2) Arasikere	Arasikere
			3) C. P. Pattana	Channarayapatna
			4) H. N. Pura	Holenarasipura
			5) Sakaleshpura	Sakaleshpura
10	Mysore	Mercara	1) Madikeri	Mercara
			2) Somavarpet	Kushalnagar
11	Mysore	Chikmagalur	1) Chikmagalur	Chikmagalur
			2) Kadur-Birur	Kadur
12	Belgaum	Belgaum	1) Belgaum	Belgaum
			,,	Anagol–Belgaum
			2) Khanapur	Khanapur
			3) Gokak	Gokak
13	Belgaum	Bijapur	1) Bijapura	Bijapur
			2) Jamakhandi	Jamakhandi
			3) Bagalkote	Bagalkote
14	Belgaum	Dharwar	1) Hubli	Hubli
			2) Lakkamanahalli	Lakkamanahalli
			3) Ranebennur	Ranebennur
			4) Gadag	Gadag
15	Belgaum	North Kanara	1) Sirsi	Sirsi
			2) Kumta	Kumta
			3) Haliyal	Haliyal
			,,	Dandeli
			4) Bhatkal	Bhatkal

16	Gulbarga	Gulbarga	1) Gulbarga	Gulbarga
			,,	Kappanur
			,,	Shahabad
			2) Chittapura	Chittapura
17	Gulbarga	Raichur	1) Raichur	Raichur
18	Gulbarga	Bidar	1) Bidar	Bidar-Gunj
			,,	Navabag-Bidar
			2) Humnabad	Humnabad
			3) Bhalki	Bhalki
19	Gulbarga	Bellary	1) Bellary	Bellary
			2) Hospet	Hospet
	Grand Total	65	Talukas	

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲು ಆ ಪ್ರಶ್ನೆಗೆ ಉತ್ತರವಾಗಿ ಬೆಂಗಳೂರು, ಮೈಸೂರು ಮುಂತಾದ ಆರು ಜಿಲ್ಲೆಗಳಲ್ಲಿ ಬಹಳ ಯಶಸ್ವಿಯಾಗಿ ಕೈಗಾರಿಕೆಗಳು ಸ್ಥಾಪನೆಯಾಗಿವೆ ಎಂದು ಹೇಳಿದ್ದಾರೆ ಅದೇ ರೀತಿಯಲ್ಲಿ ಕೋಲಾರ ಮಾಲೂರು, ಬಂಗಾರಪೇಟೆ, ಚಿಂತಾಮಣಿ, ಚಿಕ್ಕ ಬಳ್ಳಾಪುರ ಈ ಸ್ಥಳಗಳಲ್ಲಿ ಇದುವರೆಗೆ ಏತಕ್ಕೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿಲ್ಲ? ಮಂಗಳೂರಿನ ಪ್ರಶ್ನೆಗೆ ಉತ್ತರವಾಗಿ ಮುಳಬಾಗಲು, ಶಿಡ್ಲಘಟ್ಟ, ಬಂಗಾರಪೇಟೆ, ಗೌರಿಬಿದನೂರು ಈ ಪ್ರದೇಶಗಳಲ್ಲಿ ಪೆಡ್ಡಿಗಳನ್ನು ಹಾಕಲು ಯೋಜನೆಯ ನಿರ್ಮಾಣ ಕೈಗೊಂಡು ಜಮೀನು ಸ್ವಾಧೀನ ಪಡಿಸಿಕೊಂಡು ನಾಲ್ಕು ವರ್ಷಗಳೇ ಆಗಿರುತ್ತದೆ. ಪೆಡ್ಡಿಗಳನ್ನು ಕಟ್ಟಿಸುತ್ತೇವೆ, ಮಾಡುತ್ತೇವೆಂದು ಹೇಳಿ ಮುಂದೆ ಹಾಕಿಕೊಂಡೇ ಹೋಗುತ್ತಿರುತ್ತೀರಿ. ದಯವಿಟ್ಟು ಬೇಗ ನಿರ್ಮಾಣ ಮಾಡುತ್ತೀರಾ ಎಂದು ಕೇಳುತ್ತೇನೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ೧೯೮೫-೮೬ರಲ್ಲೇ ಈ ಯೋಜನೆಯನ್ನು ಕೈಗೊಂಡರೂ ಸಹ ಆ ಸ್ಥಳಗಳಲ್ಲಿ ಲ್ಯಾಂಡ್ ಪ್ರಾಬ್ಲಮ್ ಇದ್ದುದರಿಂದ ವಿಳಂಬವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇದು ನಾಲ್ಕನೆ ಬಾರಿಗೆ ಕೇಳುತ್ತಿದ್ದೇನೆ. ಮಾನ್ಯ ಸಚಿವರು ಪೆಡ್‌ಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭ ಮಾಡುತ್ತಾರೆಯೇ ಅಥವಾ ಇಲ್ಲವೇ ಅಷ್ಟು ಹೇಳಿದರೆ ಸಾಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಕಾಲ ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ಐದನೇ ಸಲ ಪ್ರಶ್ನೆಯನ್ನು ಕೇಳುವುದಕ್ಕೆ ಮುಂಚಿತವಾಗಿಯೇ ಕೆಲಸ ಶುರು ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ರೀತಿ ಮೂರು ಜನ ಸಚಿವರು ಅಂದರೆ ಮಾನ್ಯ ರಘುಪತಿಯವರು, ಮಾನ್ಯ ಜೀವಿಜಯವರವರೆಂದು ಹೇಳಿದ್ದರು, ಇವರು ನಾಲ್ಕನೆಯವರು. ಅಲ್ಲಿಯವರೆಗೆ ಇವರು ಇರುತ್ತಾರೋ ಇಲ್ಲವೋ ಗೊತ್ತಿಲ್ಲ. ಕಾಲವನ್ನು ಹೇಳುವುದು ಬೇಡ. ಮಾಡಿ ಕೊಡುತ್ತೇವೆಂದು ಹೇಳಿದರೆ ಸಾಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಬೇಗ ಶುರು ಮಾಡಿಸುತ್ತೇವೆ.

ಎನ್. ಜಿ. ಇ. ಎಫ್. ನಲ್ಲಿ ಭರ್ತಿ ಮಾಡಲಾದ ಹುದ್ದೆಗಳ ಬಗ್ಗೆ

೪೦೫೧. ಶ್ರೀ ಬಿ. ಎ. ಉಷ್ಣಿನ (ಕುಂದಗೋಳ).—ಮಾನ್ಯ ಭಾರಿ ಮಂತ್ರಿ ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ವಲಯಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಎನ್ ಜಿ ಇ ಎಫ್ ನಲ್ಲಿ ಹೊಸದಾಗಿ ಹುದ್ದೆಗಳಿಗೆ ನೇಮಕ ಮಾಡಿಕೊಂಡಿರುವ ಸಂಖ್ಯೆ ಎಷ್ಟು ? (ಕ್ಲಾಸ್‌ವಾರ್ ವಿವರಗಳನ್ನು ಒದಗಿಸುವುದು)

ಆ) ನೇಮಕಗಳನ್ನು ಮಾಡಿಕೊಳ್ಳುವಾಗ ಅನುಸರಿಸಿದ ನಿಯಮಗಳೇನು ?

ಇ) ನೇಮಕ ಮಾಡಿ ಕೊಳ್ಳುವಾಗ ಭ್ರಷ್ಟಾಚಾರ ನಡೆದದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?